# ರಾಮಕೃಷ್ಣ ಸುದ್ದಿ ಸಂಚಯ

## "ಸಹಕಾರ ಮಾಣಿಕ್ಯ"

ESTD : 1994

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ವಿಳಾಸ: 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575003.

Website:www.ramakrishnacredit.com Email: ho@ramakrishnacredit.com

ಸಂಪುಟ : IX ಸಂಚಿಕೆ : 3 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಅಕ್ಟೋಬರ್-ಡಿಸೆಂಬರ್ 2024


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

2025ನೇ ವರ್ಷ, ನಮಗೆಲ್ಲರಿಗೂ ಸುಖ, ಶಾಂತಿ ನೆಮ್ಮದಿಯನ್ನು ನೀಡಲಿ ಎಂದು ಶ್ರೀದೇವರಲ್ಲಿ ಪ್ರಾರ್ಥಿಸುತ್ತಾ, ತಮಗೆಲ್ಲರಿಗೂ 2025ನೇ ಹೊಸ ವರ್ಷದ ಹಾರ್ದಿಕ ಶುಭಾಶಯಗಳನ್ನು ಈ ಮೂಲಕ ತಿಳಿಸುತ್ತಿದ್ದೇನೆ.

ನಮ್ಮ ಸಂಘವು 2024-25ನೇ ಸಾಲಿನ ಮೂರನೇ ತ್ರೈಮಾಸಿಕ ಅವಧಿ ಅಂತ್ಯ 31.12.2024ಕ್ಕೆ ರೂ.1050 ಕೋಟಿ ಮೀರಿದ ಒಟ್ಟು ವ್ಯವಹಾರವನ್ನು ಹೊಂದಿ ಈ ವರೆಗೆ ಒಟ್ಟು ರೂ.127 ಕೋಟಿ ವ್ಯವಹಾರದೊಂದಿಗೆ ಗಣನೀಯ ಪ್ರಗತಿಯನ್ನು ಸಾಧಿಸಿದೆ ಎಂದು ತಿಳಿಸಲು ನಾನು ಹರ್ಷಿಸುತ್ತೇನೆ

### 31.12.2024 ಸಂಘದ ವ್ಯವಹಾರದ ಪಕ್ಷಿನೋಟ (Provisional Figures) ಈ ಕೆಳಗಿನಂತಿದೆ.

| ಕ್ರ ಸಂ. | ಕಾರ್ಯ ವಿಭಾಗ | ಡಿಸೆಂಬರ್ 2023ಕ್ಕೆ ಇದ್ದಂತೆ (ರೂ) | ಡಿಸೆಂಬರ್ 2024ಕ್ಕೆ ಇದ್ದಂತೆ (ರೂ) | ಹೆಚ್ಚಳ (ರೂ) | ಶೇ. ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ರೂ.498 ಕೋಟಿ | ರೂ.564 ಕೋಟಿ | ರೂ.66 ಕೋಟಿ | 13% |
| 2 | ಸಾಲ ಮತ್ತು ಮುಂಗಡ | ರೂ.426 ಕೋಟಿ | ರೂ.486 ಕೋಟಿ | ರೂ.60 ಕೋಟಿ | 14% |
| 3 | ಒಟ್ಟು ವ್ಯವಹಾರ | ರೂ.923 ಕೋಟಿ | ರೂ.1050 ಕೋಟಿ | ರೂ.127 ಕೋಟಿ | 14% |
| 4 | ನಿವ್ವಳ ಲಾಭ | ರೂ.6.66 ಕೋಟಿ | ರೂ.8.83 ಕೋಟಿ | ರೂ.2.17 ಕೋಟಿ | 33% |
| 5 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | - | - |

**31.12.2023ಕ್ಕೆ ಇದ್ದ ವ್ಯವಹಾರವನ್ನು 31.12.2024ರ ವ್ಯವಹಾರಕ್ಕೆ ಹೋಲಿಸಿದಾಗ**

1. ಠೇವಣಾತಿಯಲ್ಲಿ ರೂ.66 ಕೋಟಿ ಹೆಚ್ಚಳ (ಶೇ.13 ವೃದ್ಧಿ)
2. ಸಾಲ ಮತ್ತು ಮುಂಗಡದಲ್ಲಿ ರೂ.60 ಕೋಟಿ ಹೆಚ್ಚಳ (ಶೇ.14ವೃದ್ಧಿ).
3. ಒಟ್ಟು ವ್ಯವಹಾರದಲ್ಲಿ ರೂ.127 ಕೋಟಿ ವೃದ್ಧಿ. (ಶೇ.14 ವೃದ್ಧಿ)
4. ನಿವ್ವಳ ಅನುತ್ಪಾದಕ ಆಸ್ತಿ (Net NPA) 0%.
5. ನಿವ್ವಳ ಲಾಭದಲ್ಲಿ ರೂ.2.17 ಕೋಟಿ ಹೆಚ್ಚಳ (ಶೇ.33 ವೃದ್ಧಿ)

ಸಂಘವು 31.12.2024ರ ವರೆಗಿನ ಅವಧಿಯಲ್ಲಿ ಸಾಧಿಸಿರುವ ಪ್ರಗತಿಯ ಅಂಕಿ ಅಂಶಗಳನ್ನು ತಮ್ಮ ಮುಂದೆ ಪ್ರಸ್ತುತ ಪಡಿಸುತ್ತಾ ಸಂಘದ ಈ ಸರ್ವಾಂಗೀಣ ಪ್ರಗತಿಗೆ ಸದಾ ಸಹಕಾರವನ್ನು ನೀಡುತ್ತಿರುವ, ಸಂಘದ ಎಲ್ಲಾ ಸದಸ್ಯ ಬಾಂಧವರಿಗೆ, ಮಾರ್ಗದರ್ಶನ ನೀಡುತ್ತಿರುವ ಸಂಘದ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರುಗಳಿಗೆ, ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಮತ್ತು ಸಮಿತಿ ಸದಸ್ಯರುಗಳಿಗೆ ಹಾಗೂ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿರುತ್ತಿರುವ ಸಿಬ್ಬಂದಿ ವೃಂದಕ್ಕೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಿಮ್ಮೆಲ್ಲರ ಸಹಕಾರದಿಂದ ಮುಂದಿನ ಮೂರು ತಿಂಗಳಲ್ಲಿ ಇನ್ನಷ್ಟು ಹೆಚ್ಚಿನ ಪ್ರಗತಿಯನ್ನು ಹೊಂದಿ ವರ್ಷಾಂತ್ಯ 31.03.2025ಕ್ಕೆ ಗುರಿ ಮೀರಿದ ಸಾಧನೆಯನ್ನು ಮಾಡುವಂತಾಗಲೆಂದು ಆಶಿಸುತ್ತೇನೆ.

(ಕೆ. ಜೈರಾಜ್ ಬಿ. ರೈ)
ಅಧ್ಯಕ್ಷರು

# ಸಂಘಕ್ಕೆ "ಸಹಕಾರ ಮಾಣಿಕ್ಯ" ಪ್ರಶಸ್ತಿ



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರು, ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ಹಾಗೂ ದ.ಕ. ಮತ್ತು ಉಡುಪಿ ಜಿಲ್ಲೆಗಳ ಎಲ್ಲಾ ಸಹಕಾರ ಸಂಘಗಳ ಸಹಯೋಗದಲ್ಲಿ ದಿನಾಂಕ 16.11.2024 ಶನಿವಾರದಂದು ಮಂಗಳೂರಿನಲ್ಲಿ ಜರಗಿದ ರಾಜ್ಯ ಮಟ್ಟದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರಂಭದಲ್ಲಿ ಇದೇ ಮೊದಲ ಬಾರಿಗೆ ಅನುಷ್ಠಾನಿಸಲಾದ ಅವಿಭಜಿತ ದ.ಕ ಮತ್ತು ಉಡುಪಿ ಜಿಲ್ಲೆಯಲ್ಲಿ ಸರ್ವಾಂಗೀಣ ಪ್ರಗತಿ ಸಾಧಿಸಿದ ಅತ್ಯುತ್ತಮ ಕ್ರೆಡಿಟ್ ಸಹಕಾರ ಸಂಘಕ್ಕೆ ನೀಡಲಾಗುವ "ಸಹಕಾರ ಮಾಣಿಕ್ಯ" ಪ್ರಶಸ್ತಿಯನ್ನು ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯು ತನ್ನ ಮುಡಿಗೇರಿಸಿಕೊಂಡಿದೆ.

ಈ ಹಿಂದಿನ ವರ್ಷಗಳಲ್ಲಿ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಗೆ 6 ಬಾರಿ ರಾಜ್ಯ ಮಟ್ಟದ ಹಾಗೂ 13 ಬಾರಿ ಜಿಲ್ಲಾ ಮಟ್ಟದ ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿಯು ಲಭಿಸಿದ್ದು, ಇದೀಗ ಅವಿಭಜಿತ ದ.ಕ ಮತ್ತು ಉಡುಪಿ ಜಿಲ್ಲೆಯಲ್ಲಿ "ಸಹಕಾರ ಮಾಣಿಕ್ಯ" ಪ್ರಶಸ್ತಿ ಪಡೆದ ಪ್ರಪ್ರಥಮ ಹಾಗೂ ಏಕೈಕ ಕ್ರೆಡಿಟ್ ಸಹಕಾರ ಸಂಘ ಎಂಬ ಹೆಗ್ಗಳಿಕೆಗೆ ಸಂಘವು ಪಾತ್ರವಾಗಿದೆ.

# 71ನೇ ಅಖಿಲ ಭಾರತ ಸಹಕಾರ ಸಪ್ತಾಹ




ಮಂಗಳೂರಿನಲ್ಲಿ ಜರಗಿದ 71ನೇ ಅಖಿಲ ಭಾರತ ಸಹಕಾರಿ ಸಪ್ತಾಹ ಸಮಾರಂಭದ ಅಂಗವಾಗಿ ನಡೆಸಲಾದ ಸಹಕಾರಿ ಜಾಥಾದಲ್ಲಿ ಪಟ್ಟಣ ಸಹಕಾರಿ ಬ್ಯಾಂಕು ಮತ್ತು ಸಹಕಾರ ಸಂಘಗಳ ವತಿಯಿಂದ ಸ್ತಬ್ಧ ಚಿತ್ರ ಆಯೋಜಿಸಲು ಸಂಘದ ಅಧ್ಯಕ್ಷ ಕೆ. ಜೈರಾಜ್ ಬಿ. ರೈಯವರು ನೇತೃತ್ವ ವಹಿಸಿದರು.

# ಉಡುಪಿ ಶಾಖೆಯ ನವೀಕೃತ ಕಛೇರಿ ಉದ್ಘಾಟನೆ



ಸಂಘದ ಉಡುಪಿ ಶಾಖೆಯ ನವೀಕೃತ ಹವಾನಿಯಂತ್ರಿತ ಶಾಖಾ ಕಛೇರಿಯನ್ನು ಸಂಘದ ಉಡುಪಿ ಶಾಖಾ ಉಸ್ತುವಾರಿ ನಿರ್ದೇಶಕರಾದ ಶ್ರೀ ರವೀಂದ್ರನಾಥ ಜಿ. ಹೆಗ್ಡೆಯವರು ದಿನಾಂಕ 26.12.2024 ರಂದು ಉದ್ಘಾಟಿಸಿದ ಸಂದರ್ಭ

## ಹುಟ್ಟು ಹಬ್ಬದ ಶುಭಾಶಯಗಳು

### ಜನವರಿ 2025 ರಿಂದ ಮಾರ್ಚ್ 2025ರ ಅವಧಿಯಲ್ಲಿ ಜನ್ಮದಿನವನ್ನು ಆಚರಿಸುವ ತಮಗೆಲ್ಲರಿಗೂ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು

| ಸಿಬ್ಬಂದಿಗಳ ಹೆಸರು | ಶಾಖೆ | ಸಿಬ್ಬಂದಿಗಳ ಹೆಸರು | ಶಾಖೆ |
|---|---|---|---|
| ಶ್ರೀಮತಿ ಹರಿಣಿ ರೈ ಬಿ. | ಸುಳ್ಯ | ಶ್ರೀ ವಿನಯ ಕುಮಾರ್ ಶೆಟ್ಟಿ | ಮೂಡಬಿದ್ರಿ |
| ಕು. ಸಪ್ತಮಿ ಎಸ್. ರೈ | ಪುತ್ತೂರು | ಶ್ರೀ ರೋಹಿತ್ ಎಂ.ಜೆ. | ಬೆಳ್ತಂಗಡಿ |
| ಶ್ರೀಮತಿ ವೀಣಾ ಶೆಟ್ಟಿ | ಕೈಕಂಬ | ಕು. ರಮ್ಯ | ಬೈಂದೂರು |
| ಶ್ರೀ ಗೋಪಾಲಕೃಷ್ಣ ಪಿ. | ವಿಟ್ಲ | ಶ್ರೀ ರಮೇಶ್ ಕೆ. | ಮುಲ್ಕಿ |
| ಶ್ರೀ ಧನಂಜಯ ಶೆಟ್ಟಿಗಾರ್ | ಶಿರ್ವ | ಶ್ರೀ ಪಾಂಡುರಂಗ ನ್ಯಾಕ್ | ಬ್ರಹ್ಮಾವರ |
| ಶ್ರೀಮತಿ ರಾಧಿಕ ಎಂ. | ವಿಟ್ಲ | ಶ್ರೀ ನಿತೇಶ್ ಕುಮಾರ್ | ಮಂಗಳೂರು |
| ಶ್ರೀ ಹರೀಶ್ | ಸುರತ್ಕಲ್ | ಕು। ಸ್ವಾತಿ | ಕುಂದಾಪುರ |
| ಶ್ರೀಮತಿ ಸನಿಹ ಶೆಟ್ಟಿ | ಕೇಂದ್ರ ಕಛೇರಿ | ಶ್ರೀ ಮಿಲನ್ ಎಂ. | ಸುಳ್ಯ |
| ಶ್ರೀ ಗಣೇಶ | ಕೇಂದ್ರ ಕಛೇರಿ | ಕು। ಅಕ್ಷತ | ಪುತ್ತೂರು |



ಡಾ| ಎಮ್. ಸುಧಾಕರ ಶೆಟ್ಟಿ
MBBS, DGO

## ಭಾವಪೂರ್ಣ ಶ್ರದ್ಧಾಂಜಲಿ

ಸಂಘದಲ್ಲಿ 1997ರಿಂದ 2015ರ ವರೆಗೆ 17 ವರ್ಷ ಮೂಡಬಿದ್ರೆ ಶಾಖೆಯ ಶಾಖಾ ಸಲಹಾ ಸಮಿತಿಯ ಅಧ್ಯಕ್ಷರಾಗಿ, 2015 ರಿಂದ ಈವರೆಗೆ ಸಂಘದ ನಿರ್ದೇಶಕರಾಗಿ, ಸಂಘದ ಪ್ರಗತಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿ, ಇದೀಗ ನಮ್ಮನ್ನು ಅಗಲಿದ ಶ್ರೀಯುತರನ್ನು ಗೌರವ ಪೂರ್ವಕವಾಗಿ ಸ್ಮರಿಸುತ್ತಾ, ಅಗಲಿದ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಸಂಘದ ವತಿಯಿಂದ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

## ಶ್ರದ್ಧಾಂಜಲಿ

* ಸಂಘದ ಸುರತ್ಕಲ್ ಶಾಖಾ ಸಲಹಾ ಸಮಿತಿ ಸದಸ್ಯರಾದ ಡಾ| ಮಂಜಯ್ಯ ಶೆಟ್ಟಿಯವರು ದೈವಾಧೀನರಾಗಿರುವರು.
* ಸಂಘದ ಉಪ್ಪಿನಂಗಡಿ ಶಾಖಾ ಸಲಹಾ ಸಮಿತಿ ಸದಸ್ಯರಾದ ಶ್ರೀ ಬಾಬು ಶೆಟ್ಟಿಯವರು ದೈವಾಧೀನರಾಗಿರುವರು.

**ಅಗಲಿದ ದಿವ್ಯಚೇತನಕ್ಕೆ ಚಿರಶಾಂತಿ ಕೋರಿಕೊಂಡು, ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.**

## ಅಭಿನಂದನೆಗಳು

- ಸಂಘದ ಉಪ್ಪಿನಂಗಡಿ ಶಾಖೆಯ ಸಿಬ್ಬಂದಿ ಶ್ರೀಮತಿ ವಿಧಿಶಾರವರು ಗಂಡು ಮಗುವಿನ ತಾಯಿಯಾಗಿದ್ದಾರೆ.
- ಸಂಘದ ಮಂಗಳೂರು ಶಾಖೆಯ ಸಿಬ್ಬಂದಿ ಶ್ರೀಮತಿ ಅಶ್ವಿನಿ ಎಸ್. ಶೆಟ್ಟಿರವರು ಹೆಣ್ಣು ಮಗುವಿನ ತಾಯಿಯಾಗಿದ್ದಾರೆ.
- ಸಂಘದ ಉಡುಪಿ ಶಾಖೆಯ ಸಿಬ್ಬಂದಿ ಶ್ರೀಮತಿ ಅಶ್ವಿನಿರವರು ಗಂಡು ಮಗುವಿನ ತಾಯಿಯಾಗಿದ್ದಾರೆ.

**ಇವರಿಗೆ ಹಾರ್ದಿಕ ಅಭಿನಂದನೆಗಳು.**

- ಸಂಘದ ಹೆಬ್ರಿ ಶಾಖೆಯ ಸಿಬ್ಬಂದಿ ಚಿ| ಸೌ| ಪೂರ್ಣಿಮಾರವರ ವಿವಾಹವು ಚಿ| ವಿಜೇಂದ್ರಮಣಿ ರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ **ನವ ವಧೂ-ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.**

Private Circulation only

**BOOK POST**

To ..............................................................................

..........................................................................

....................................................................

If not delivered please return to **SRI RAMAKRISHNA CREDIT CO-OPERATIVE SOCIETY LTD.,**
2nd Floor, Amruthothsav Building, Bunts Hostel Circle, Mangalore – 575 003.